ಕರ್ನಾಟಕ ಸರ್ಕಾರ

ನಿರ್ದೇಶಕರು, ಅಂಗವಿಕಲರ ಮತ್ತು ಹಿರಿಯ ನಾಗರಿಕರ ಕಲ್ಯಾಣ ಇಲಾಖೆ, ಬೆಂಗಳೂರು ಇವರು ಹೊರಡಿಸಿದ ನಡವಳಿಗಳು.

ವಿಷಯ: ಫೌಂಡೇಷನ್ ಫಾರ್ ಆ್ಯಕ್ಷನ್ ಮೋಟಿವೇಷನ್ ಅಂಡ್ ಎಂಪವರ್‌ಮೆಂಟ್ ಇಂಡಿಯಾ ಜೆ.ಪಿ.ನಗರ, ಬೆಂಗಳೂರು ನಗರ ಇವರ ಆಶ್ರಯದಲ್ಲಿ ಬೆಂಗಳೂರಿನಲ್ಲಿ ನಡೆಸುತ್ತಿರುವ ಬುದ್ಧಿಮಾಂದ್ಯ ಮಕ್ಕಳ ಶಾಲೆಗೆ ಅನುಮತಿ ನೀಡುವ ಬಗ್ಗೆ.

ಉಲ್ಲೇಖ: ಉಪನಿರ್ದೇಶಕರು, ಬೆಂಗಳೂರು ನಗರ ಇವರ ಪತ್ರ ಸಂ: ಉನಿಬೆಂ.ನ:ಅಂ.ಕ.ವಿ:ತನಿಖಾ ವರದಿ:05-06:771:ದಿನಾಂಕ: 11-8-2005.

* * *

ಪ್ರಸ್ತಾವನೆ:

ಫೌಂಡೇಷನ್ ಫಾರ್ ಆಕ್ಷನ್ ಮೋಟಿವೇಷನ್ ಅಂಡ್ ಎಂಪವರ್‌ಮೆಂಟ್ ಇಂಡಿಯಾ, ಜೆ.ಪಿ.ನಗರ, ಬೆಂಗಳೂರು ನಗರ ಇವರ ಸಂಸ್ಥೆಗೆ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು ಬೇಟಿ ನೀಡಿ ತನಿಖೆ ಮಾಡಿದ್ದು ವರದಿಯಲ್ಲಿ ಸಂಸ್ಥೆಯು ತೃಪ್ತಿಕರವಾಗಿ ನಡೆಯುತ್ತಿರುವುದರಿಂದ ಸದರಿ ಸಂಸ್ಥೆಗೆ ಅನುಮತಿ ನೀಡಲು ಶಿಫಾರಸ್ಸು ಮಾಡಿರುವರು.

ಅಂಗವಿಕಲರ ಕಲ್ಯಾಣಾಧಿಕಾರಿ ಮತ್ತು ಉಪನಿರ್ದೇಶಕರು, ಬೆಂಗಳೂರು ನಗರ ಇವರು ಶಿಫಾರಸ್ಸು ಮಾಡಿರುವುದರಿಂದ ಸಂಸ್ಥೆಯಲ್ಲಿ ತರಬೇತಿ ಹೊಂದಿರುವ ಸಿಬ್ಬಂದಿಗಳನ್ನು ಮತ್ತು ಸಂಸ್ಥೆಯಲ್ಲಿ ಮೂಲಭೂತ ಸೌಕರ್ಯಗಳನ್ನು ಮುಂದಿನ ಶೈಕ್ಷಣಿಕ ವರ್ಷದೊಳಗೆ ನೆರವೇರಿಸುವ ನಿರ್ಬಂಧದ ಮೇರೆಗೆ ಬುದ್ಧಿಮಾಂದ್ಯ ಮಕ್ಕಳ ವಿದ್ಯಾಭ್ಯಾಸದ ಹಿತದೃಷ್ಟಿಯಿಂದ ಬುದ್ಧಿಮಾಂದ್ಯ ಮಕ್ಕಳ ಶಾಲೆಯನ್ನು ನಡೆಸಲು 2005-06ನೇ ಸಾಲಿನಲ್ಲಿ ಅನುಮತಿ ನೀಡಲು ಉದ್ದೇಶಿಸಲಾಗಿದೆ. ಆದುದರಿಂದ ಈ ಕೆಳಕಂಡ ಆದೇಶ.

ಸಂಖ್ಯೆ:ನಿಅಕ:02:ಅನುಮತಿ:2005-06

ನಿರ್ದೇಶಕರ ಕಚೇರಿ,
ಅಂಗವಿಕಲರ ಮತ್ತು ಹಿರಿಯ
ನಾಗರಿಕರ ಕಲ್ಯಾಣ ಇಲಾಖೆ
ಪೋಡಿಯಂ ಬ್ಲಾಕ್
ವಿಶ್ವೇಶ್ವರಯ್ಯ ಕೇಂದ್ರ, ಗೋಪುರ
ಬೆಂಗಳೂರು-560001

ದಿನಾಂಕ: 12-9-2005

## ಆ ದೇ ಶ

ನಿರ್ದೇಶಕರು, ಅಂಗವಿಕಲರ ಮತ್ತು ಹಿರಿಯ ನಾಗರಿಕರ ಕಲ್ಯಾಣ ಇಲಾಖೆ, ಬೆಂಗಳೂರು ಇವರು ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳನ್ವಯ ಫೌಂಡೇಷನ್ ಫಾರ್ ಆಕ್ಷನ್ ಮೋಟಿವೇಷನ್ ಅಂಡ್ ಎಂಪವರ್‌ಮೆಂಟ್ ಇಂಡಿಯಾ, ಜೆ.ಪಿ.ನಗರ, ಬೆಂಗಳೂರು ನಗರ ಇವರ ಆಶ್ರಯದಲ್ಲಿ ನಡೆಸುತ್ತಿರುವ ಬುದ್ಧಿಮಾಂದ್ಯ ಮಕ್ಕಳ ಶಾಲೆಗೆ ಕನ್ನಡ ಮಾಧ್ಯಮದಲ್ಲಿ 2005-06ನೇ ಸಾಲಿನಿಂದ ವಸತಿ ರಹಿತವಾಗಿ ಶಾಲೆಯನ್ನು ನಡೆಸಲು ಸಂಸ್ಥೆಯಲ್ಲಿ ತರಬೇತಿ ಹೊಂದಿರುವ ಶಿಕ್ಷಕ ಸಿಬ್ಬಂದಿಗಳನ್ನು ಮತ್ತು ಮೂಲಭೂತ ಸೌಕರ್ಯಗಳನ್ನು ಮುಂದಿನ ಶೈಕ್ಷಣಿಕ ವರ್ಷದೊಳಗೆ ನೆರವೇರಿಸುವ ನಿರ್ಬಂಧದ ಮೇರೆಗೆ ಬುದ್ಧಿಮಾಂದ್ಯ ಮಕ್ಕಳ ಶಿಕ್ಷಣದ ಹಿತದೃಷ್ಟಿಯಿಂದ ಈ ಆದೇಶಕ್ಕೆ ಲಗತ್ತಿಸಿರುವ ಅನುಬಂಧದ ಷರತ್ತು ಮತ್ತು ನಿಬಂಧನೆಗೊಳಪಟ್ಟು ತಾತ್ಕಾಲಿಕವಾಗಿ ಅನುಮತಿಯನ್ನು ನೀಡಲಾಗಿದೆ.

ನಿರ್ದೇಶಕರು,
ಅಂಗವಿಕಲರ ಮತ್ತು ಹಿರಿಯ ನಾಗರಿಕರ ಕಲ್ಯಾಣ ಇಲಾಖೆ,
ಬೆಂಗಳೂರು.

ಗೆ,
ಕಾರ್ಯಕಾರಿ ನಿರ್ದೇಶಕರು,
ಫೌಂಡೇಷನ್ ಫಾರ್ ಆಯಕ್ಷನ್ ಮೋಟಿವೇಷನ್ ಅಂಡ್ ಎಂಪವರ್‌ಮೆಂಟ್ ಇಂಡಿಯಾ,
1130, 19ನೇ ಮುಖ್ಯರಸ್ತೆ, ಜೆ.ಪಿ.ನಗರ, 2ನೇ ಫೇಸ್,
ಬೆಂಗಳೂರು 560078.

ಪ್ರತಿಯನ್ನು:
ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಕಚೇರಿ, ಬೆಂಗಳೂರು ನಗರ ಇವರ ಮಾಹಿತಿಗಾಗಿ.

ಆದೇಶ ಸಂ: ನಿಅಕಇ: 02: ಅನುಮತಿ: 2005-06:ದಿನಾಂಕ: 12-9-2005 ಇದರ ಅನುಬಂಧ

ಷರತ್ತು ಮತ್ತು ನಿಬಂಧನೆಗಳು

1. ಸಂಸ್ಥೆಯ ಸಿಬ್ಬಂದಿಯವರ ನೇಮಕಾತಿ ಮಾಡುವಾಗ ಕಡ್ಡಾಯವಾಗಿ ಮೀಸಲಾತಿಯನ್ವಯ ಪರಿಶಿಷ್ಟ ಜಾತಿ: ಪರಿಶಿಷ್ಟ ವರ್ಗ ಹಾಗೂ ಅಂಗವಿಕಲ ಅಭ್ಯರ್ಥಿಗಳಿಗೆ ಆದ್ಯತೆಯನ್ನು ನೀಡಿ ಭರ್ತಿ ಮಾಡಿಕೊಳ್ಳತಕ್ಕದ್ದು.
2. ಸಂಸ್ಥೆಯು ಖಾಲಿ ಹುದ್ದೆಗಳನ್ನು ಭರ್ತಿಮಾಡಿಕೊಳ್ಳಲು ಹಾಗೂ ಹೊಸ ಹುದ್ದೆಗಳನ್ನು ಸೃಷ್ಟಿಸಿ ಭರ್ತಿ ಮಾಡುವಾಗ ಇಲಾಖೆಯ ಒಬ್ಬ ಅದಿಕಾರಿಯನ್ನು ಸಂದರ್ಶನದ ಸಮಯದಲ್ಲಿ ಹಾಜರು ಪಡಿಸಿಕೊಳ್ಳುವುದು.
3. ಶಿಕ್ಷಣ ಇಲಾಖೆಯ ನಿಯಮಗಳೆಲ್ಲವೂ ಅಂಗವಿಕಲರ ಸಂಸ್ಥೆಗಳಿಗೂ ಸಹ ಅನ್ವಯವಾಗುವುದರಿಂದ ಅವುಗಳನ್ನು ತಪ್ಪದೇ ಪಾಲಿಸುವುದು. ಮತ್ತು ಶಿಕ್ಷಣ ಇಲಾಖೆಯ ಅಧಿಕಾರಿಗಳು ಸಹ ಸಂಸ್ಥೆಯ ತಪಾಸಣೆ ಮಾಡುವ ಅಧಿಕಾರವನ್ನು ಹೊಂದಿರುತ್ತಾರೆ.
4. ರಾಜ್ಯ ಸರ್ಕಾರದಿಂದ ಅಂಗೀಕಾರವಾದ ಪಠ್ಯ ಕ್ರಮ (ಸಿಲಿಬಸ್)ಗಳನ್ನು ಶಿಕ್ಷಣ ಇಲಾಖೆಯ ನಿಯಮಗಳಂತೆ ಪಾಲಿಸತಕ್ಕದ್ದು.
5. ಸಂಸ್ಥೆಯವರು ಈ ಶಾಲೆಗೆ ಸಾಮಾನ್ಯ ವಿದ್ಯಾರ್ಹತೆ ಜೊತೆಗೆ ಸಂಬಂಧಿಸಿದ ಬುದ್ಧಿಮಾಂದ್ಯತೆಯಲ್ಲಿ ವಿಶೇಷ ತರಬೇತಿ ಹೊಂದಿರುವ ಸಿಬ್ಬಂದಿಗಳನ್ನು ನೇಮಿಸಿಕೊಳ್ಳತಕ್ಕದ್ದು.
6. ಶಾಲೆಗೆ ಸೂಕ್ತವಾದ ಕಟ್ಟಡ, ಸ್ಥಳವಕಾಶ ಹಾಗೂ ಇತರೆ ನಾಗರೀಕ ಸೌಲಭ್ಯಗಳನ್ನು ತಪ್ಪದೇ ಒದಗಿಸತಕ್ಕದ್ದು.
7. ಇಲಾಖೆಯು ಕಾಲ ಕಾಲಕ್ಕೆ ಹೊರಡಿಸುವ ಆದೇಶಗಳಿಗೆ ಸಂಸ್ಥೆಯು ಬದ್ಧವಾಗಿರತಕ್ಕದ್ದು
8. ಶಾಲೆಯು ಪ್ರಾರಂಭವಾದ ನಂತರ ಅನುಮತಿ ಪಡೆದು ಇಲಾಖೆಯಿಂದ ಮಾನ್ಯತೆ ಪಡೆದುಕೊಳ್ಳತಕ್ಕದ್ದು.
9. ಈ ಅನುಮತಿ ಆದೇಶವು ಬುದ್ಧಿಮಾಂದ್ಯರ ಶಾಲೆಯನ್ನು ನಿರ್ವಹಿಸಲು ಮಾತ್ರ ಅನ್ವಯಿಸುವುದು. ನಂತರ ತರಗತಿಗಳನ್ನು ಪ್ರಾರಂಭಿಸುವಾಗ ಪ್ರತಿ ವರ್ಷಕ್ಕೊಂದು ತರಗತಿಯಂತೆ ಪ್ರಸ್ತಾವನೆ ಸಲ್ಲಿಸಿ ಅನುಮತಿ ಪಡೆಯತಕ್ಕದ್ದು.
10. ಈ ಮೇಲಿನ ತಾತ್ಕಾಲಿಕವಾದ ಅನುಮತಿಯು 2005-06ನೇ ಸಾಲಿನ ಶೈಕ್ಷಣಿಕ ವರ್ಷದಿಂದ ಮಾತ್ರ ಅನ್ವಯಿಸುವಂತೆ ಹೊರಡಿಸಲಾಗಿದೆ
12. ವಿಶೇಷ ತರಬೇತಿ ಹೊಂದಿದ ಶಿಕ್ಷಕರನ್ನು ನೇಮಕ ಮಾಡದಿದ್ದಲ್ಲಿ ಸರ್ಕಾರದಿಂದ ಯಾವುದೇ ಸೌಲಭ್ಯಗಳನ್ನು ನೀಡಲಾಗುವುದಿಲ್ಲ/ ಹಾಗೂ ಈಗ ನೀಡಿರುವ ಅನುಮತಿಯನ್ನು ಹಿಂದಕ್ಕೆ ತೆಗೆದುಕೊಳ್ಳಲಾಗುವುದು.
13. ಸರ್ಕಾರದ ಆದೇಶ ಸಂ: ಮಮಇ: 484:ಪಿಹೆಚ್‌ಪಿ:2003, ದಿ: 05-3-04ರಲ್ಲಿ ಸೂಚಿಸಿರುವಂತೆ ಕನಿಷ್ಟ ಸೌಲಭ್ಯಗಳನ್ನು ಒದಗಿಸತಕ್ಕದ್ದು. ತಪ್ಪಿದಲ್ಲಿ ಯಾವುದೇ ಕಾರಣಗಳನ್ನು ನೀಡದೇ ಅನುಮತಿಯನ್ನು ರದ್ದುಪಡಿಸಲಾಗುವುದು.

ಮೇಲಿನ ಎಲ್ಲಾ ಷರತ್ತುಗಳನ್ನು ಕಾಲ ಕಾಲಕ್ಕೆ ಹೊರಡಿಸಿದ ಇಲಾಖೆಯ ಸರ್ಕಾರಿ ಆದೇಶಗಳನ್ನು ಪಾಲಿಸದೇ ಇರುವಂತಹ ವಿಚಾರವು ಈ ನಿರ್ದೇಶನಾಲಯದ ಗಮನಕ್ಕೆ ಬಂದಲ್ಲಿ ಸಂಸ್ಥೆಗೆ ನೀಡಿರುವಂತಹ ಅನುಮತಿ ಆದೇಶವನ್ನು ಯಾವ ಕಾರಣಗಳನ್ನೂ ನೀಡದೇ ಹಿಂದಕ್ಕೆ ಪಡೆದುಕೊಳ್ಳುವ ಅಥವಾ ರದ್ದುಗೊಳಿಸುವಂತಹ ಅಧಿಕಾರವನ್ನು ಈ ನಿರ್ದೇಶನಾಲಯವು ಕಾಯ್ದಿರಿಸಿಕೊಂಡಿರುತ್ತದೆ.

ನಿರ್ದೇಶಕರು,
ಅಂಗವಿಕಲರ ಮತ್ತು ಹಿರಿಯ ನಾಗರೀಕರ ಕಲ್ಯಾಣ ಇಲಾಖೆ
ಬೆಂಗಳೂರು.